ತರಹ ಕೊಡಬೇಕಾಗಿಲ್ಲ, ಜಿಲ್ಲಾ ಪಂಚಾಯಿತಿಯಲ್ಲಿ ತೀರ್ಮಾನವಾಗಿದ್ದರೂ ಕೂಡ, ನಮ್ಮ ಜಿಲ್ಲೆಯಲ್ಲಿ ಲೋಕಸಭಾ ಸದಸ್ಯರಿಗೆ ಅವರು ಹೇಳಿದಂತೆಯೇ 50 ಭಾಗ ಕೆಲಸವನ್ನು ಕೊಡಬೇಕೆಂದು ತೀರ್ಮಾನ ಮಾಡಿದ್ದಾರೆ. ಜಿಲ್ಲಾ ಪಂಚಾಯಿತಿ ಮಾಡುವುದಾದರೆ ಪೂರ್ತಿ ಅವರೇ ಮಾಡಲಿ. ಅದರಲ್ಲಿ 50 ಭಾಗ ಲೋಕಸಭಾ ಸದಸ್ಯರಿಗೆ ಏಕೆ ಕೊಡಬೇಕು, ಹಾಗಾದರೆ ಶಾಸಕರಿಗೆ 50 ಭಾಗ ಕೊಡಿ. ಪ್ರತ್ಯೇಕವಾಗಿ ಲೋಕಸಭಾ ಸದಸ್ಯರಿಗೆ ಎರಡು ಕೋಟಿ ರೂಪಾಯಿಗಳ ಹಣ ಕೊಡುತ್ತಾರೆ. ಇಎಎಸ್‌ದಲ್ಲಿ ಕೂಡ 50 ಭಾಗದಷ್ಟು ಕೊಟ್ಟರೆ, ನಮ್ಮ ಪರಿಸ್ಥಿತಿ ಏನು ಎನ್ನುವುದರ ಬಗ್ಗೆ ತಮ್ಮ ಮೂಲಕ ಮಾನ್ಯ ಸಚಿವರಲ್ಲಿ ಪ್ರಾರ್ಥನೆ ಮಾಡುತ್ತೇನೆ.

ಸಕಲೇಶಪುರ ತಾಲ್ಲೂಕು ಕ್ರಾಫರ್ಡ್ ಆಸ್ಪತ್ರೆಯಲ್ಲಿ ವೈದ್ಯಾಧಿಕಾರಿಗಳ ಕೊರತೆ.

198(2624)

ಶ್ರೀ ಶಿವಪ್ಪ ಬಿ.ಬಿ.(ಸಕಲೇಶಪುರ): ಮಾನ್ಯ ಆರೋಗ್ಯ ಮತ್ತು ಕುಟುಂಬ ಕಲ್ಯಾಣ ಸಚಿವರು ಈ ಕೆಳಕಂಡ ಪ್ರಶ್ನೆಗಳಿಗೆ ದಯವಿಟ್ಟು ಉತ್ತರಿಸುವರೆ?

ಅ) ಹಾಸನ ಜಿಲ್ಲೆ ಸಕಲೇಶಪುರ ತಾಲ್ಲೂಕು ಕ್ರಾಫರ್ಡ್ ಆಸ್ಪತ್ರೆಯಲ್ಲಿ ವೈದ್ಯಾಧಿಕಾರಿಗಳ ಕೊರತೆ ಇರುವುದು ಸರ್ಕಾರದ ಗಮನಕ್ಕೆ ಬಂದಿದೆಯೇ?

ಆ) ಯಾವ ಯಾವ ಹುದ್ದೆಗಳು ಖಾಲಿ ಇದೆ, ಎಷ್ಟು ವರ್ಷದಿಂದ?

ಇ) ಸದರಿ ಹುದ್ದೆಗಳನ್ನು ಭರ್ತಿ ಮಾಡುವ ಉದ್ದೇಶವಿದೆಯೇ?

ಈ) ಹಾಗಿದ್ದಲ್ಲಿ ಎಂದು ಮಾಡಲಾಗುವುದು?

ಡಾ॥ ಎ.ಬಿ.ಮಾಲಕರೆಡ್ಡಿ (ಆರೋಗ್ಯ ಮತ್ತು ಕುಟುಂಬ ಕಲ್ಯಾಣ ಸಚಿವರು):

ಅ) ಬಂದಿದೆ.

ಆ) 1) ಪ್ರಸೂತಿ ತಜ್ಞರು - 1 ವರ್ಷದಿಂದ

2) ಜನರಲ್ ಮೆಡಿಸಿನ್ - 1 ವರ್ಷದಿಂದ

3) ನೇತ್ರ ತಜ್ಞರು - 3 ವರ್ಷದಿಂದ

4) ಕಿವಿ, ಮೂಗು, ಗಂಟಲು ತಜ್ಞರು - 1 ವರ್ಷದಿಂದ

5) ಕ್ಷ- ಕಿರಣ ತಜ್ಞರು - 3 ವರ್ಷದಿಂದ

6) ಅರವಳಿಕೆ ತಜ್ಞರು - 5 ವರ್ಷದಿಂದ

ಇ) ಹೌದು.

ಈ) ಆಯ್ಕೆ ಕಾರ್ಯ ಪೂರ್ಣಗೊಂಡ ಕೂಡಲೇ ಭರ್ತಿ ಮಾಡಲಾಗುವುದು.

ಶ್ರೀ ಬಿ.ಬಿ.ಶಿವಪ್ಪ: ಸನ್ಮಾನ್ಯ ಅಧ್ಯಕ್ಷರೆ, ಮಾನ್ಯ ಸಚಿವರು ತಮ್ಮ ಉತ್ತರದಲ್ಲಿ ಸಕಲೇಶಪುರದ ಆಸ್ಪತ್ರೆಯಲ್ಲಿ ಖಾಲಿ ಇರತಕ್ಕಂಥ ವೈದ್ಯರ ಹುದ್ದೆಗಳ ಬಗ್ಗೆ ವಿವರವನ್ನು ಒದಗಿಸಿದ್ದಾರೆ. ಒಂದು ವರ್ಷದಿಂದ ಪ್ರಸೂತಿ ತಜ್ಞರು, ಒಂದು ವರ್ಷದಿಂದ ಜನರಲ್ ಮೆಡಿಸಿನ್, 3 ವರ್ಷದಿಂದ ನೇತ್ರ ತಜ್ಞರು, ಒಂದು ವರ್ಷದಿಂದ ಕಿವಿ, ಮೂಗು, ಗಂಟಲು ತಜ್ಞರು, 3 ವರ್ಷದಿಂದ ಕ್ಷ-ಕಿರಣ ತಜ್ಞರು ಹಾಗೂ 5 ವರ್ಷದಿಂದ ಅರವಳಿಕೆ ತಜ್ಞರು ಎಂದು ಹೇಳಿದ್ದಾರೆ. ಸಕಲೇಶಪುರ ಒಂದು ವಿಮಾನ ನಿಲ್ದಾಣವಿದ್ದ ಹಾಗೆ. ಬೇರೆ ಕಡೆಯಿಂದ ಬಂದು ಎರಡು ತಿಂಗಳು ಇದ್ದು ಹಾಸನಕ್ಕೆ ಹೊರಟು ಹೋಗುತ್ತಾರೆ. ನಾನು ಅನೇಕ ಸಲ ಮಾನ್ಯ ಸಚಿವರ ಜೊತೆಯಲ್ಲಿ ಮಾತನಾಡಿದ್ದೇನೆ. ಇಲ್ಲಿಂದ ಬೇರೆ ಕಡೆ ವರ್ಗಾವಣೆ ಮಾಡಬೇಕಾದರೆ ಆ ಜಾಗಕ್ಕೆ ಬೇರೆಯವರನ್ನು ನೇಮಕ ಮಾಡಿದ ನಂತರ ಬಿಡುಗಡೆ ಮಾಡಿ ಎಂದು ಹೇಳಿದ್ದೇನೆ, ಅವರು ಯಾರದ್ದೋ ಶಿಫಾರಸ್ಸು ತಂದು ಹೊರಟು ಹೋಗುತ್ತಾರೆ. ಸಕಲೇಶಪುರದಲ್ಲಿ ಮೂರು ಜನ ಮಾತ್ರ ವೈದ್ಯರುಗಳು ಇರುವುದು. 18 ಜನ ವೈದ್ಯರು ಇರಬೇಕಾದಂಥ ಸ್ಥಳ ಅದು. ಪತ್ರಿಕೆಯವರು ಬರೆಯುತ್ತಾರೆ, ಜನಪರವಾಗಿ ಮಾತನಾಡುವ ಶಾಸಕರಾದ ಶ್ರೀ ಬಿ.ಬಿ.ಶಿವಪ್ಪ ಈ ಬಗ್ಗೆ ಗಮನವನ್ನು ಹರಿಸಲಿಲ್ಲ, ಆಸ್ಪತ್ರೆಯ ಮೇಲ್ವಿಚಾರಣೆಯ ಬಗ್ಗೆ ಗಮನವನ್ನು ಹರಿಸಿ, ಜನಪ್ರತಿನಿಧಿಗಳು ತಮ್ಮ ಹೊಣೆಯನ್ನು ಇಟ್ಟು ಜನರಿಗೆ ಅನುಕೂಲವಾಗುವ ರೀತಿಯಲ್ಲಿ ಕೆಲಸವನ್ನು ಮಾಡಬೇಕೆಂದು ಪತ್ರಿಕೆಯ ಮೂಲಕ ಬುದ್ಧಿಯನ್ನು ಹೇಳುತ್ತಾರೆ. ನಾನು ಏನು ಮಾಡಬೇಕು? ಇದರ ಬಗ್ಗೆ ಸಾಕಷ್ಟು ಪತ್ರಗಳನ್ನು ಬರೆದಿರುತ್ತೇನೆ. ನೇರವಾಗಿ ನಾನು ಜಿಲ್ಲಾಧಿಕಾರಿಗಳಿಗೆ ಕೂಡ ಪತ್ರವನ್ನು ಬರೆದದ್ದು ಆಯಿತು. ಜಿಲ್ಲಾಧಿಕಾರಿಗಳು ಅಪಾಯಿಂಟ್‌ಮೆಂಟ್ ಮಾಡಿಕೊಳ್ಳುತ್ತೇವೆಂದು ಹೇಳಿದರು. ನಾನೇ ಕೆಲವು ಕಡೆ ವೈದ್ಯರುಗಳನ್ನು ಕರೆದುಕೊಂಡು ಬಂದಿರುತ್ತೇನೆ. 15-20 ದಿವಸಕ್ಕೆ ಮಾತ್ರ ನಿಯೋಜನೆಯನ್ನು ತೆಗೆದುಕೊಳ್ಳುತ್ತಾರೆ, ನಂತರ ಎಲ್ಲರೂ ಹಾಸನಕ್ಕೆ ಹೋಗುತ್ತಾರೆ. ಅರವಳಿಕೆ ತಜ್ಞರ ಹುದ್ದೆ ಕಳೆದ 5 ವರ್ಷಗಳಿಂದ ಖಾಲಿ ಇದೆ. ಹಾಸನದಲ್ಲಿ 4 ಜನ ವೈದ್ಯರಿದ್ದಾರೆ. ಬೇಲೂರಿನಲ್ಲಿ ಇಬ್ಬರು, ಇಲ್ಲಿಂದಲಾದರೂ ಒಬ್ಬರನ್ನು ನಿಯೋಜನೆ ಮೇಲೆ ಸಕಲೇಶಪುರಕ್ಕೆ ಹಾಕಬೇಕು. ನಮ್ಮದು ಪೂರ್ತಿ ಪ್ಲಾಂಟೇಷನ್ ಏರಿಯಾ ಇರುತ್ತದೆ.

ಇಲ್ಲಿ ಕಾರ್ಮಿಕರು ಜಾಸ್ತಿ ಬರುವುದು. ಯಾರೋ ಒಬ್ಬ ಪುಣ್ಯಾತ್ಮ ದೊಡ್ಡ ಆಸ್ಪತ್ರೆಯನ್ನು ಕಟ್ಟಿಸಿ ಹೋಗಿದ್ದಾರೆ. ಈ ರೀತಿ ಪರಿಸ್ಥಿತಿಯಾದರೆ ಜನಪ್ರತಿನಿಧಿಗಳಾದ ನಾವು ಏನು ಮಾಡಬೇಕು ಎನ್ನುವುದರ ಬಗ್ಗೆ ತಾವು ಹೇಳಬೇಕು.

ಡಾ:ಎ.ಬಿ.ಮಾಲಕರಡ್ಡಿ: ಮಾನ್ಯ ಅಧ್ಯಕ್ಷರೆ, ಹೆಚ್ಚು ಕಡಿಮೆ ಎಲ್ಲಾ ತಾಲ್ಲೂಕು ಆಸ್ಪತ್ರೆಗಳಲ್ಲಿ ತಾವು ಹೇಳಿದ ಹಾಗೆ ಪರಿಸ್ಥಿತಿ ಇದೆ. ಬರೀ ಸಕಲೇಶಪುರದಲ್ಲಿ ಮಾತ್ರ ಅಲ್ಲ. ನಮ್ಮಲ್ಲಿ 336 ಪರಿಣಿತ ತಜ್ಞರ ಹುದ್ದೆಗಳು ಖಾಲಿ ಇವೆ. ಅಲ್ಲಿ ಸಿಬ್ಬಂದಿ ವರ್ಗ ಇರುವುದಿಲ್ಲ. The point of entry into service is only PHC. So, automatically it is reflected at taluk level as well as district level. ಇಲ್ಲಿಯವರೆಗೆ ಪ್ರಾಥಮಿಕ ಆರೋಗ್ಯ ಕೇಂದ್ರದಲ್ಲಿ ಸಿಕ್ಕಾಪಟ್ಟೆ ವೈದ್ಯರ ಕೊರತೆ ಇತ್ತು.

೧೧.೦೦ ಎಎಂ

ಸರ್ಕಾರ ಇದನ್ನು ಗಮನಿಸಿ ಮೊದಲು ಗ್ರಾಮಾಂತರ ಪ್ರದೇಶಗಳಲ್ಲಿ ಪ್ರಸೂತಿ ತಜ್ಞರನ್ನು ಗುತ್ತಿಗೆ ಆಧಾರದ ಮೇಲೆ ನೇಮಕಾತಿ ಮಾಡುತ್ತಿತ್ತು. ಈಗ ಸರ್ಕಾರ ಕ್ಯಾಬಿನೆಟ್ ಡಿಸಿಷನ್ ತೆಗೆದುಕೊಂಡು ತಾಲ್ಲೂಕು ಮಟ್ಟದಲ್ಲಿಯೂ ಕೂಡ ಗುತ್ತಿಗೆ ಆಧಾರದ ಮೇಲೆ ತಜ್ಞರನ್ನು ನೇಮಕ ಮಾಡಬೇಕೆಂದು ತೀರ್ಮಾನಿಸಿದ ನಂತರ ಹಾಸನ ಜಿಲ್ಲಾಧಿಕಾರಿಗಳು ಎರಡು ಸಾರಿ ಜಾಹಿರಾತು ಕೊಡಲಾಗಿತ್ತು. ಎರಡು ಸಾರಿ ಜಾಹಿರಾತನ್ನು ಕೊಟ್ಟರೂ ಸಹ 15 ಅರ್ಜಿಗಳು ಬಂದಿದ್ದು ಅದರಲ್ಲಿ ಸಂದರ್ಶನಕ್ಕೆ ಏಳು ಜನ ಮಾತ್ರ ಬಂದಿದ್ದರು. ಅವರಲ್ಲಿ ನಿಮ್ಮ ತಾಲ್ಲೂಕಿನಲ್ಲಿ ಒಬ್ಬ ಆರ್ಥೋಪಿಡಿಕ್ ಸರ್ಜನ್ ಸೇರಿದ್ದಾರೆ. ಅರಸೀಕೆರೆಯವರು ಒಬ್ಬರು ಸೇರಿದ್ದಾರೆ, ಚನ್ನರಾಯಪಟ್ಟಣದ ಒಬ್ಬರು, ಬೇಲೂರು, ಹೊಳೆನರಸೀಪುರಕ್ಕೆ ಒಬ್ಬರು ಸೇರಿದ್ದಾರೆ. ನಮ್ಮ ಯಾದ್‌ಗಿರಿಯಲ್ಲಿ 19 ಜನ ತಜ್ಞರ ಅವಶ್ಯಕತೆ ಇದ್ದು ಅದಕ್ಕೆ ಕೇವಲ ಎರಡು ಅರ್ಜಿಗಳು ಮಾತ್ರ ಬಂದಿದ್ದವು. ಇದು ಇತ್ತೀಚಿನ ಸಮಸ್ಯೆಯಲ್ಲ ಸುಮಾರು 20 ವರ್ಷಗಳಿಂದ ಬಂದಂತಹ ಕೊರತೆಯಾಗಿದೆ. 336 ತಜ್ಞರ ಕೊರತೆ ಏಕೆ ಬಂತು? ಇಟ್ ಈಸ್ ನಾಟ್ ರಿಯಲ್, ಇಟ್ ಈಸ್ ಆರ್ಟಿಫಿಷಿಯಲ್. ಆರ್ಟಿಫಿಷಿಯಲ್ ಹೇಗೆ? ವರ್ಲ್ಡ್ ಬ್ಯಾಂಕ್‌ನವರು ನಮ್ಮ ಕರ್ನಾಟಕ ರಾಜ್ಯಕ್ಕೆ ಇಲ್ಲಿ ಇನ್‌ಫ್ರಾಸ್ಟ್ರಕ್ಚರ್ ಚೆನ್ನಾಗಿದೆ ಎಂದು ತಿಳಿದುಕೊಂಡು 543 ಕೋಟಿ ರೂಪಾಯಿಗಳ ಅನುದಾನವನ್ನು ಕೊಟ್ಟರು. ಅವರು ಒಂದು ಷರತ್ತು ಹಾಕಿದ್ದರು, ಇಷ್ಟೊಂದು ದೊಡ್ಡ ಪ್ರಮಾಣದಲ್ಲಿ ಹಣವನ್ನು ಕೊಡುತ್ತೇವೆಂದ ಮೇಲೆ ಸೆಕೆಂಡರಿ ಲೆವೆಲ್, ಜಿಲ್ಲಾ ಮತ್ತು ತಾಲ್ಲೂಕು ಆಸ್ಪತ್ರೆಗಳ ಉನ್ನತೀಕರಣಕ್ಕಾಗಿ, ಏಸ್ತರಣೀಕರಣಕ್ಕಾಗಿ ಹಣವನ್ನು ಕೊಡುತ್ತೇವೆಂದ ಮೇಲೆ, ನೀವು ಪ್ರತಿಯೊಂದು ವಿಷಯದಲ್ಲಿನ ತಜ್ಞರನ್ನು ನೇಮಕಾತಿ ಮಾಡಬೇಕೆಂಬ

ಕಂಡೀಷನ್ ಹಾಕಿ ಬರೆಸಿಕೊಂಡರು. ಏಕೆಂದರೆ ಜನರಿಗೆ ಉತ್ತಮ ಗುಣಮಟ್ಟದ ಸೌಲಭ್ಯ ದೊರೆಯಲೆಂದು ಅವರು ಅಂಡರ್‌ಟೇಕಿಂಗ್ ತೆಗೆದುಕೊಂಡರು, ನಾವು ಕೊಟ್ಟೆವು. 30 ಬೆಡ್‌ಗೆ 5 ಜನ ತಜ್ಞರು ಬೇಕು, ಮೆಡಿಸನ್, ಸರ್ಜರಿ, ಪೀಡಿಯಾಟ್ರಿಕ್ಸ್, ಗೈನಾಕಾಲಜಿ, ಡೆಂಟಿಸ್ಟ್ ಒಂದು ಸಮುದಾಯಕ್ಕೆ, ಕೇಂದ್ರಕ್ಕೆ ಇಷ್ಟು ಮಂದಿ ಇರಬೇಕು. ತಾಲ್ಲೂಕು ಆಸ್ಪತ್ರೆಗಳಲ್ಲಿ 50 ಬೆಡ್ ಇದ್ದರೆ 9 ಜನ ತಜ್ಞರು ಇರಬೇಕು. ಅದರಲ್ಲಿ ಇ.ಎನ್.ಟಿ. ಆಫ್ತಾಲ್‌ಮಾಲಜಿ ಅನಸ್ತೇಷಿಯಾ ಆ್ಯಡ್ ಮಾಡುತ್ತಾರೆ. 100 ಬೆಡ್ ಇದ್ದರೆ 11 ಮಂದಿ ತಜ್ಞರು ಇರಬೇಕು. ಈ ರೀತಿಯಾಗಿ ಟ್ಯಾಬ್ಯುಲೇಷನ್ ಹಾಕಿ ಕೊಟ್ಟಿದ್ದಾರೆ. ಮೊದಲು ಈ ರೀತಿ ಇರಲಿಲ್ಲ.

Sri P.G.R.SINDYA: We want to know what is the difficulty in recruiting these people? ಕರ್ನಾಟಕ ಹೆಲ್ತ್ ಸಿಸ್ಟಮ್‌ನಲ್ಲಿ 550 ಕೋಟಿ ರೂಪಾಯಿಗಳಲ್ಲಿ ಬಿಲ್ಡಿಂಗ್ಸ್ ಕಟ್ಟಿ ಇನ್‌ಫ್ರಾಸ್ಟ್ರಕ್ಚರನ್ನು ಡೆವಲಪ್ ಮಾಡಿ ಅವನ್ನೆಲ್ಲಾ ಹಾಗೆ ಇಟ್ಟಿದ್ದೇವೆ. But you have been giving these reasons for the last twenty months.

ಡಾ: ಎ.ಜಿ.ಮಾಲಕರೆಡ್ಡಿ: ನಾನು ಪ್ರಾರಂಭದಲ್ಲಿಯೇ ಹೇಳಿದ್ದೇನೆ. The point of entering the service is only at the Primary Health Centre level. We have not barred people with M.D./M.S. from joining. ಪಾಯಿಂಟ್ ಆಫ್ ಎಂಟ್ರಿ ಪ್ರೈಮರಿ ಹೆಲ್ತ್ ಸೆಂಟರ್ ಇರುವುದರಿಂದ ಹೋದ ಸಾರಿ 573 ಜನರನ್ನು ಅಪಾಯಿಂಟ್ ಮಾಡಿದ್ದೇವೆ. ಜಾಯಿನ್ ಆದವರು ಎಷ್ಟು ಜನರೆಂದರೆ 249 ಮಾತ್ರ. ಈ ಸರ್ಕಾರವು ಅಧಿಕಾರಕ್ಕೆ ಬಂದ ಮೇಲೆ 1076 ಜನರನ್ನು ನೇಮಕ ಮಾಡಿದ್ದೇವೆ. ಆದರೆ ಗ್ರಾಮಾಂತರ ಪ್ರದೇಶಗಳಲ್ಲಿ ಹೋಗಿ ಕೆಲಸ ಮಾಡಲು ಅವರು ತಯಾರಿಲ್ಲ. That is the whole difficulty. ಈಗಾಗಲೇ ನಿವೃತ್ತಿ ಹೊಂದಿರತಕ್ಕಂತಹ ತಜ್ಞರನ್ನು ಮತ್ತೆ ಗುತ್ತಿಗೆ ಆಧಾರದ ಮೇಲೆ ನೇಮಕ ಮಾಡುವಂತಹ ಅಧಿಕಾರವನ್ನು ಕೊಟ್ಟಿದ್ದೇವೆ.

ಶ್ರೀ ಕರಡಿ ಸಂಗಣ್ಣ ಅಮರಪ್ಪ: ಈಗ ಗುತ್ತಿಗೆ ಆಧಾರದ ಮೇಲೆ ತಾಲ್ಲೂಕು ಮಟ್ಟದಲ್ಲಿ ವೈದ್ಯರನ್ನು ನೇಮಕ ಮಾಡುವಂತಹ ವ್ಯವಸ್ಥೆಯನ್ನು ಮಾಡಿದ್ದೀರಿ. ಆದರೆ ವಾಸ್ತವವಾಗಿ ನೋಡಿದರೆ ಖಾಸಗಿಯಾಗಿ ಅವರು ಪ್ರಾಕ್ಟೀಸ್ ಮಾಡಿದರೆ ಸಾಕಷ್ಟು ಹಣವನ್ನು ಸಂಪಾದಿಸುತ್ತಾರೆ. ಇವರು ಕೊಡುವ ಸಂಬಳ ಸಾಕಾಗುವುದಿಲ್ಲ ಅವರು ನೇಮಕಗೊಂಡು ಮರುದಿವಸ ಬಿಟ್ಟು ಹೋಗುತ್ತಾರೆ. ಸರ್ಕಾರ ಅವರಿಗೆ ಹೆಚ್ಚು ಸಂಬಳ ಕೊಡುವ ವ್ಯವಸ್ಥೆ ಮಾಡಿದರೆ ಅವರು ಕೆಲಸವನ್ನು ಮಾಡುತ್ತಾರೆ.

ಡಾ:ಎ.ಬಿ.ಮಾಲಕರೆಡ್ಡಿ: ತಜ್ಞರ ಕೊರತೆ ಏಕೆ ಬಂದಿದೆ ಎಂದರೆ, ನಾವು ಅಂಡರ್‌ಟೇಕಿಂಗ್ ಕೊಟ್ಟಿದ್ದಕ್ಕಾಗಿ ಇಷ್ಟು ಕ್ರಿಯೇಟ್ ಮಾಡಿದ್ದೇವೆಂದು ಸರ್ಕಾರ ಆಜ್ಞೆ ಹೊರಡಿಸಿದೆ, ಇದು ಕೊರತೆ ಎಂಬುದು ನನಗೆ ಭಾಸವಾಗುತ್ತದೆ. ಇದಕ್ಕಿಂತ ಹೆಚ್ಚಿನ ಸೌಲಭ್ಯವನ್ನು ಸರ್ಕಾರ ಒದಗಿಸಿಕೊಡುವುದಕ್ಕೆ ಸಾಧ್ಯವಿಲ್ಲ.

Sri P.G.R.SINDYA: We never expected such an answer from Dr.Malaka Reddy. He is pleading the helplessness on behalf of the government by saying this is all we can do, nothing further. ಲೋಕಲ್ ಕ್ಯಾಂಡಿಡೇಟ್‌ಗಳನ್ನು ಅಪಾಯಿಂಟ್‌ಮೆಂಟ್ ಮಾಡಿಕೊಳ್ಳುವುದಕ್ಕೆ ಜಿಲ್ಲಾಧಿಕಾರಿಗಳಿಗೆ ಅಧಿಕಾರ ಕೊಡುವ ಬಗ್ಗೆ ಆದೇಶವಾಗಿ ಎಂಟು ವರ್ಷಗಳಾಯಿತು. ಈಗ ನೀವು ತಾಲ್ಲೂಕಿನಲ್ಲಿರತಕ್ಕಂತಹ ಆಸ್ಪತ್ರೆಗಳಲ್ಲಿ ವೈದ್ಯರನ್ನು ನೇಮಿಸಿಕೊಳ್ಳಲು ಜಿಲ್ಲಾಧಿಕಾರಿಗಳಿಗೆ ಅಧಿಕಾರವನ್ನು ಕೊಟ್ಟಿದ್ದೀರಾ? ನಾನು ಕೇಳುವುದೇನೆಂದರೆ ಕರ್ನಾಟಕ ಹೆಲ್ತ್ ಸಿಸ್ಟಮ್ ಸ್ಕೀಂನಲ್ಲಿ ವಿಶ್ವಬ್ಯಾಂಕಿನಿಂದ ಸಾಲತೆಗೆದುಕೊಂಡು ಮೂಲಭೂತ ಸೌಲಭ್ಯಗಳನ್ನು ಅಭಿವೃದ್ಧಿ ಮಾಡುತ್ತೇವೆಂದು ಏನು ಹೇಳುತ್ತಿದ್ದೀರಿ it has become sheer waste. ಬರೀ ಸಾಲವನ್ನು ತೆಗೆದುಕೊಂಡು ಸಾಲ ತೀರಿಸುವುದು, ಸಾಲಕ್ಕೆ ಬಡ್ಡಿ ಕಟ್ಟುವುದು ಇಷ್ಟೇ ಆಗಿದೆ, ಉಪಯೋಗವೇನೂ ಆಗಿಲ್ಲ. ಅದಕ್ಕೋಸ್ಕರ you must go in for a special scheme to recruit these doctors and specialists. ನೀವು ಅನೇಕ ವಿಚಾರಗಳನ್ನು ಪತ್ರಿಕೆಗಳಲ್ಲಿ ಹೇಳಿ ಪ್ರಚಾರ ತೆಗೆದುಕೊಳ್ಳುತ್ತಿದ್ದೀರೇ ವಿನಃ ವಾಸ್ತವವಾಗಿ ತಾಲ್ಲೂಕು ಆಸ್ಪತ್ರೆಗಳಲ್ಲಿ ಒಂದು ಹುದ್ದೆಯೂ ಕೂಡ ನೇಮಕವಾಗುತ್ತಿಲ್ಲ. You have already completed two years. Do you want two more years? Let the government come out with a policy. Let them say in the next 12 months we are going to do it.

ಡಾ: ಎ.ಬಿ.ಮಾಲಕರೆಡ್ಡಿ: ಈಗ ಎರಡು ಸಾರಿ ಹುದ್ದೆಗಳ ನೇಮಕಾತಿಗೆ ಪ್ರಕಟಣೆ ಮಾಡಲಾಗಿದೆ. ನೀವು ರಚನಾತ್ಮಕವಾದ ಸಲಹೆಗಳನ್ನು ರೆಗ್ಯುಲರ್ ನೇಮಕಾತಿಗಳನ್ನು ಜಿಲ್ಲಾ ಮಟ್ಟದಲ್ಲಿ ಹಾಗೂ ತಾಲ್ಲೂಕು ಮಟ್ಟದಲ್ಲಿ ಮಾಡಲು ಕೂಡಿ.

ಶ್ರೀ ಪಿ.ಜಿ.ಆರ್.ಸಿಂಧ್ಯಾ: ಒಂದು ಕಡೆ ಬೇಕು ಬೇಕಾದವರಿಗೆ ನೇಮಕಾತಿಯನ್ನು ಮಾಡುತ್ತೀರಿ, ಇನ್ನೊಂದು ಕಡೆ ರೂರಲ್ ಪ್ರದೇಶದಲ್ಲಿ ಹೆಲ್ತ್ ಪ್ರಾಕ್ಟೀಸ್ ಮಾಡುವುದನ್ನು ಕಂಪಲ್ಸರಿ ಮಾಡುತ್ತೇವೆಂದು ಹೇಳುತ್ತೀರಿ. ಇವೆಲ್ಲಾವನ್ನು ಬಾಯಿಯಲ್ಲಿ ಹೇಳುತ್ತೀರೇ ಹೊರತು ಕೃತಿಯಲ್ಲಿ ಏತಕ್ಕಾಗಿ ಮಾಡುತ್ತಿಲ್ಲ?

ಶ್ರೀ ಡಿ.ಬಿ.ಚಂದ್ರೆಗೌಡ: ತಾವು ಬಿಟ್ಟು ಹೋಗುವಂತಹ ಸಮಯದಲ್ಲಿ 20 ಮೆಡಿಕಲ್ ಕಾಲೇಜುಗಳಿಗೆ ಪರವಾನಗಿ ಕೊಟ್ಟಿದ್ದೀರಿ ಎಂಬುದು ನಿಮ್ಮ ನೆನಪಿನಲ್ಲಿರಲಿ.

ಶ್ರೀ ಪಿ.ಜಿ.ಆರ್.ಸಿಂಧ್ಯಾ: ನಮ್ಮ ಕಾಲದಲ್ಲಿ ಏನೇನು ಸರ್ಕಾರಿ ಆದೇಶಗಳನ್ನು ಮಾಡಿದ್ದೇವೋ ಅದನ್ನೆಲ್ಲವನ್ನೂ ತರಿಸಿ. ಒಂದು ದಿವಸ ವಿಶೇಷ ಅಧಿವೇಶನವನ್ನು ಕರೆದು ಅದರಲ್ಲಿ ಏನೇನು ವಿಶೇಷ ಬದಲಾವಣೆಗಳನ್ನು ನೀವು ಮಾಡಿಕೊಂಡಿದ್ದೀರಿ ಎನ್ನುವುದನ್ನು ನಾವು ಹೇಳ್ತೀನಿ.

ಶ್ರೀ ಡಿ.ಬಿ.ಚಂದ್ರೆಗೌಡ: ಬೇಕು ಬೇಕಾದವರಿಗೆ ಮೂಲಭೂತ ಸೌಲಭ್ಯಗಳಿಲ್ಲ, ರಿಕ್ವೆಲರ್ಡ್ ಮೆಟೀರಿಯಲ್ಸ್ ಇಲ್ಲದ ಕಾಲೇಜುಗಳಿಗೂ ಅನುಮತಿಯನ್ನು ಕೊಡಲಾಗಿದೆ.

Sri P.G.R.SINDYA: At least Dr.Malaka Reddy is honest to say. ಮುಂದೆ ಆಗಲ್ಲವೆಂದು ಹೇಳಿದ್ದಾರೆ. ನಾನು ಅವರಿಗೆ ತುಂಬಾ ಆಭಾರಿಯಾಗಿದ್ದೇನೆ.

ಶ್ರೀ ಎಸ್.ಹೆಚ್.ಪುಟ್ಟರಂಗನಾಥ್: ಬೇಲೂರಿನಲ್ಲಿ ಎರಡು ವರ್ಷಗಳಿಂದ ವೈದ್ಯರುಗಳಿಲ್ಲ. ಅಲ್ಲಿ ಇಬ್ಬರು ಮಾತ್ರ ವೈದ್ಯರುಗಳಿದ್ದಾರೆ, ಜನಗಳು ಮಾತನಾಡಿಕೊಳ್ಳುವುದನ್ನು ಕೇಳಿದರೆ ನಮಗೆ ನಾಚಿಕೆಯಾಗುತ್ತದೆ. ಅದು ಪ್ರವಾಸಣೀಯ ಸ್ಥಳವಾಗಿದೆ. ಅಂತಹ ಸ್ಥಳಕ್ಕೆ ವೈದ್ಯರನ್ನು ಪೋಸ್ಟ್ ಮಾಡುವುದಿಲ್ಲವೆಂದರೆ ಹೇಗೆ? ನೀವು ದೊಡ್ಡ ದೊಡ್ಡ ಕುಳಗಳನ್ನು ಆಯ್ಕೆ ಮಾಡಿದರೆ ಅವರು ಹೇಗೆ ಬಂದು ಕೆಲಸ ಮಾಡುತ್ತಾರೆ? ಬಡವರು ಬರುವುದಕ್ಕೆ ತಯಾರಿರುತ್ತಾರೆ, ಅಂಥವರನ್ನು ನೀವು ಆಯ್ಕೆ ಮಾಡುವುದಿಲ್ಲ. ಇದು ದುಡ್ಡಿನ ಮೇಲೆ ನಡೆಯುತ್ತಿದೆ.....

(ಗೊಂದಲ)

ಶ್ರೀ ಎಸ್.ಎಸ್.ಪಾಟೀಲ್: ಮಾನ್ಯ ಅಧ್ಯಕ್ಷರೆ, ಇದನ್ನು ಅರ್ಧಗಂಟೆ ಚರ್ಚೆಗೆ ಅವಕಾಶವನ್ನು ಮಾಡಿಕೊಡಿ, ಇದರ ಬಗ್ಗೆ ವಿವರವಾದ ಚರ್ಚೆಯಾಗಬೇಕಾಗಿದೆ.

ಅಧ್ಯಕ್ಷರು: ಹೆಲ್ತ್ ಡಿಪಾರ್ಟ್‌ಮೆಂಟ್ ಡಿಮ್ಯಾಂಡ್ ಬಂದಂಥ ಸಂದರ್ಭದಲ್ಲಿ ಎಲ್ಲರೂ ಮಾತನಾಡಿ.

ಶ್ರೀ ಎಂ.ಚಂದ್ರಪ್ಪ: ಮಾನ್ಯ ಅಧ್ಯಕ್ಷರೆ, ಬೇಡಿಕೆಗೆ ಸಂಬಂಧಪಟ್ಟಂತೆ ಮಾನ್ಯ ಮುಖ್ಯಮಂತ್ರಿಗಳು ಉತ್ತರವನ್ನು ಕೊಡುತ್ತಾರೆ. ಆದರೆ ಸಂಬಂಧಪಟ್ಟಂತಹ ಸಚಿವರು ಉತ್ತರವನ್ನು ಕೊಡುವುದಿಲ್ಲ. ನಾವು ಕೇಳತಕ್ಕಂತಹ ಪ್ರಶ್ನೆಗಳಿಗೆ ಇಲ್ಲಿ

ಸಂಬಂಧಪಟ್ಟಂತಹ ಸಚಿವರುಗಳು ಉತ್ತರವನ್ನು ಕೊಡುವುದರಿಂದ ನಾವು ಪ್ರಶ್ನೆಯನ್ನು ಕೇಳುವುದಕ್ಕೆ ಅವಕಾಶ ಮಾಡಿಕೊಡಿ.

ಶ್ರೀ ಬಿ.ಬಿ.ಶಿವಪ್ಪ: ಮಾನ್ಯ ಮಂತ್ರಿಗಳಲ್ಲಿ ನನ್ನ ಬೇಡಿಕೆ ಏನೆಂದರೆ ಬದಲಿ ಬಾರದ ವೈದರನ್ನು ವರ್ಗಾವಣೆ ಮಾಡಬಾರದು. 3-4 ತಿಂಗಳುಗಳ ಹಿಂದೆ ಡಪ್ಯುಟೇಷನ್ ಎಂದು ಸಕಲೇಶಪುರದಿಂದ ಹೊರಗಡೆ ಹಾಕಿರುವಂಥವರನ್ನು ಪುನಃ ಇಲ್ಲಿಗೆ ಕಳುಹಿಸುವಂತಹ ವ್ಯವಸ್ಥೆಯನ್ನು ಮಾಡಬೇಕು. ಯಾವುದಾದರೂ ಒಂದು ಆಸ್ಪತ್ರೆಯಲ್ಲಿ ಮೂರ್ನಾಲ್ಕು ಜನ ಅನಸ್ತೇಷಿಯಾ ಡಾಕ್ಟರ್‌ಗಳು ಇದ್ದಾಗ ಅಲ್ಲಿಂದ ಒಬ್ಬರನ್ನು ಸಕಲೇಶಪುರ ಆಸ್ಪತ್ರೆಗೆ ವರ್ಗಾವಣೆ ಮಾಡಬೇಕೆಂದು ಕೇಳಿಕೊಳ್ಳುತ್ತೇನೆ.

ಡಾ: ಎ.ಬಿ.ಮಾಲಕರೆಡ್ಡಿ: ಮಾನ್ಯ ಅಧ್ಯಕ್ಷರೆ, ಅನಸ್ತೇಷಿಯಾ ಡಾಕ್ಟರ್ಸ್ ಎಲ್ಲಾ ಕಡೆಗೂ ಇದ್ದಾರೆ. ಏಕ್ಸ್‌ರೇಯಾ ಆಸ್ಪತ್ರೆಯಲ್ಲಿದ್ದಾರೆ. ಅದಕ್ಕೆ ನಾವೊಂದು ಮಾಡಿಫಿಕೇಷನ್ ಮಾಡಿದ್ದೇವೆ. ಪ್ರೈವೇಟ್‌ನವರು ಯಾರಾದರೂ ಅನಸ್ತೇಷಿಯಾ ಪ್ರಾಕ್ಟೀಸ್ ಮಾಡುವವರು ಇದ್ದರೆ, ಅವರ ಅವಶ್ಯಕತೆ ಬಿದ್ದಾಗ ಅವರಿಗೆ ಗೌರವಧನವನ್ನು ಕೊಟ್ಟು ಪ್ರತಿಯೊಂದು ಕೇಸಿನಲ್ಲಿ ನೂರು, ಎರಡುನೂರು ಹೀಗೆ ಒಪ್ಪಂದ ಮಾಡಿಕೊಂಡು ಅವರು ಎಷ್ಟು ಹಣವನ್ನು ಕೇಳುತ್ತಾರೆ ಅಷ್ಟನ್ನು ಕೊಟ್ಟು ಸರ್ಕಾರಿ ಆಸ್ಪತ್ರೆಗಳಲ್ಲಿ ಅವರ ಸೇವೆ ಲಭ್ಯವಾಗುವಂತೆ ಈ ವ್ಯವಸ್ಥೆಯನ್ನು ಈಗಾಗಲೇ ಮಾಡಿದ್ದೇವೆ. ಅದೇ ರೀತಿ ಗೈನಾಕಲೋಜಿಸ್ಟ್ ವ್ಯವಸ್ಥೆ ಮಾಡಿದ್ದೇವೆ. ಏನಾದರೂ ಕಾಂಪ್ಲಿಕೇಟೆಡ್ ಕೇಸಸ್ ಇದ್ದರೆ ಸುತ್ತಮುತ್ತ ಯಾರಾದರೂ ಇದ್ದರೆ ಅವರ ಸೇವೆಯನ್ನು ತೆಗೆದುಕೊಂಡು ಗೌರವಧನವನ್ನು ಕೊಡುವಂತಹ ವ್ಯವಸ್ಥೆಯನ್ನು ಮಾಡಿದ್ದೇವೆ.

ಅಧ್ಯಕ್ಷರು: ಮಾನ್ಯ ಶಿವಪ್ಪನವರೇ, ಈಗಾಗಲೇ 15 ನಿಮಿಷವಾಗಿದೆ, ಮುಂದಿನ ಪ್ರಶ್ನೆ ಮಾನ್ಯ ಸುಭಾಷ್ ಕಲ್ಲೂರ್‌ರವರೇ ಕೇಳಿ. ಸಕಲೇಶಪುರಕ್ಕೆ ಡಾಕ್ಟರ್ ಬೇಕೆಂದು ತಾವು ಕೇಳಿದ್ದೀರಿ ಸಧ್ಯಕ್ಕೆ ಕೊಡುವುದಕ್ಕಾಗುವುದಿಲ್ಲವೆಂದು ಮಂತ್ರಿಗಳು ಹೇಳಿದ್ದಾರೆ.

ಶ್ರೀ ಬಿ.ಬಿ.ಶಿವಪ್ಪ: ಸಧ್ಯಕ್ಕೆ ಎರಡು ಮೂರು ಜನ ಇರುವ ಕಡೆ ಒಬ್ಬರನ್ನು ಅಲ್ಲಿಗೆ ಹಾಕಲಿಕ್ಕೆ ಹೇಳಿ. ಸಕಲೇಶಪುರದಿಂದ ತೆಗೆದುಕೊಂಡು ಹೋಗಿ ಬೇರೆಕಡೆ ಹಾಕಿದ್ದಾರೆ. 2-3 ತಿಂಗಳ ಹಿಂದೆ ಬಂದು ಚಾರ್ಜ್ ತೆಗೆದುಕೊಂಡು ಕೆಲಸ ಮಾಡುತ್ತಿದ್ದವರನ್ನು ತಕ್ಷಣ ಹಾಸನಕ್ಕೆ ಹಾಕಿದ್ದಾರೆ. ಅಂತಹವನ್ನು ಅಲ್ಲಿಗೆ ಹಾಕಿಸಲಿಕ್ಕೆ ಆಗುತ್ತದೆ.

ವಿದ್ಯಾರ್ಥಿಗಳ ವಾರ್ಷಿಕ ವ್ಯಾಸಂಗಕ್ಕೆ ಖರ್ಚು ಮಾಡುವ ಹಣದಲ್ಲಿ ತಾರತಮ್ಯ.